ಅಧ್ಯಕ್ಷರು.—ಈಗ ಸದಸ್ಯರಾದ ಶ್ರೀ ಎಸ್.ಎನ್. ಬೇಡ್ ಅವರು ಅಬ್ಸೆಂಟ್.

ಸುಬ್ರಹ್ಮಣ್ಯದಲ್ಲಿರುವ ಕುಮಾರ ಪರ್ವತ ಕಾಡಿನ ರಕ್ಷಣೆ

೧೬೫೯. ಶ್ರೀ ಬಿ.ಎಂ. ಇದಿನಬ್ಬ,(ಉಳ್ಳಾಲ).—ಮಾನ್ಯ ಅರಣ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡದ ಸುಬ್ರಹ್ಮಣ್ಯದ ಕುಮಾರ ಪರ್ವತದ ಕಾಡನ್ನು ಸಂರಕ್ಷಿತ ಅರಣ್ಯವೆಂದು ಘೋಷಿಸಿ ಮರಗಳ ಕಡಿತವನ್ನು ಸಂಪೂರ್ಣ ನಿಲ್ಲಿಸಲಾಗುವುದೇ?

ಆ) ಈ ಅರಣ್ಯವನ್ನು ಯಾವುದಾದರೂ ಕಂಪನಿಗೆ ಕೊಡಲಾಗಿದೆಯೇ?

ಇ) ಅರಣ್ಯ ಸಂಪತ್ತಿನ ನೆಲೆಯಾದ ಸುಬ್ರಹ್ಮಣ್ಯ ನೇತ್ರಾವತಿ ನದಿಯನ್ನು ಬರಡಾಗಿಸಲು ಸಂಚು ನಡೆಯುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ ಜೆ.ಎಸ್. ದೇಶಮುಖ್ (ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಸುಬ್ರಹ್ಮಣ್ಯ ಅರಣ್ಯ ಪ್ರದೇಶವನ್ನು ೧೯೦೫ನೇ ಇಸವಿಯಲ್ಲಿ ಕಾದಿಟ್ಟ ಅರಣ್ಯವೆಂದು ಘೋಷಿಸಲಾಗಿದೆ. ಆದರಂತೆ ಅರಣ್ಯ ಪ್ರದೇಶಕ್ಕೆ ಯಾವುದೇ ಹಾನಿ ಆಗದಂತೆ. ೪೦ ವರ್ಷಗಳಿಗೊಮ್ಮೆ 'ಆಯ್ದು ಕಡಿಯುವ ನಿಯಮಕ್ಕೆ' (on selection felling basis)ಗೆ ಅನುಸಾರವಾಗಿ ಕಾಮಗಾರಿಯನ್ನು ನಡೆಸಲಾಗುತ್ತಿದೆ.

ಆ) ಹೌದು ಈ ಪ್ರದೇಶವು ಕೆಲವು ದಶಕಗಳ ಹಿಂದೆಯೇ ಮೆ: ಮಫತ್‌ಲಾಲ್ ಪ್ಲೈವುಡ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು ಇವರಿಗೆ ನೀಡಿದ ಗುತ್ತಿಗೆ ಪ್ರದೇಶಗಳಲ್ಲಿ ಸೇರಿದೆ.

ಇ) ಈ ಅರಣ್ಯ ಪ್ರದೇಶವು ಉತ್ತಮ ಸ್ಥಿತಿಯಲ್ಲಿದ್ದು, ಅದಕ್ಕೆ ಧಕ್ಕೆಯಾಗದಂತೆ ಜಾಗರೂಕತೆ ವಹಿಸಿ ನೋಡಿಕೊಳ್ಳಲಾಗುವುದು.

ಶ್ರೀ ಬಿ. ಎಂ ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ಒಂದನೇ ಪ್ರಶ್ನೆಗೆ ಸುಬ್ರಹ್ಮಣ್ಯ ಅರಣ್ಯ ಪ್ರದೇಶವನ್ನು ೧೯೦೫ನೇ ಇಸವಿಯಲ್ಲಿ ಕಾದಿಟ್ಟ ಅರಣ್ಯವೆಂದು ಘೋಷಿಸಲಾಗಿದೆ ಎಂದು ಒಂದು ಕಡೆ ಹೇಳಿ, ಇನ್ನೊಂದು ಕಡೆ ಈ ಪ್ರದೇಶವನ್ನು ಮಫತ್‌ಲಾಲ್ ಪ್ಲೈವುಡ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆಗೆ ನೀಡಲಾಗಿದೆ ಎಂದು ಹೇಳಿದ್ದೀರಿ. ಆದ್ದರಿಂದ ಈ ಕಂಪನಿಯವರು ಗುತ್ತಿಗೆ ಪಡೆದ ಮೇಲೆ ಸಮೃದ್ಧವಾದ ಕಾಡನ್ನು ನಾಶ ಮಾಡಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಾ ನೈಸರ್ಗಿಕ ಸಂಪತ್ತನ್ನು ಸೂರೆ ಮಾಡುತ್ತಿರುವುದು ನಿಮಗೆ ಗೊತ್ತಿಲ್ಲವೆ?

ಶ್ರೀ ಜೆ. ಎಸ್ ದೇಶಮುಖ್.—ಈಗಾಗಲೇ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಖಾಸಗಿಯವರಿಗೆ ಈ ರೀತಿ ಗುತ್ತಿಗೆ ಕೊಡುತ್ತಿದ್ದ ಪದ್ಧತಿಯನ್ನು ಇನ್ನು ಮುಂದೆ ಕೈಬಿಟ್ಟು ಸರ್ಕಾರದವರೇ ಗಿಡಗಳನ್ನು ಕಡಿದು ಡಿಪೋಗಳಿಗೆ ತಂದು ಪೂರೈಸುವ ಆದೇಶ ನೀಡಲಾಗಿದೆ. ಖಾಸಗಿಯವರು ಇನ್ನು ಮುಂದೆ ಕಾಯ್ದಿಟ್ಟ ಅರಣ್ಯ ಪ್ರದೇಶಗಳಿಗೆ ಪ್ರವೇಶ ಮಾಡಲು ಅವಕಾಶ ಕೊಡುವುದಿಲ್ಲ. ಈಗಿರುವ ಮಫತ್‌ಲಾಲ್ ಕಂಪನಿಯ ಲೀಸನ್ನು ಎಕ್ಸ್‌ಟೆನ್‌ಷನ್ ಮಾಡಬೇಕೋ ಅಥವಾ ಬೇಡವೊ. ಎಂಬುದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿದೆ.

ಶ್ರೀ ಬಿ.ಎಂ ಇದಿನಬ್ಬ.—ನೀವು ಕ್ರಮ ತೆಗೆದುಕೊಳ್ಳಿ. ಆದರೆ ಆ ಸಂದರ್ಭದಲ್ಲಿ ಸಮೃದ್ಧ ಸಮೃದ್ಧವಾದ ಅರಣ್ಯವನ್ನು ಈ ಕಂಪನಿಯವರು ನಾಶ ಮಾಡುತ್ತಿರುವುದರ ವಿರುದ್ಧ ಉಗ್ರ ಕ್ರಮ ಮೊದಲು ತೆಗೆದುಕೊಳ್ಳಬೇಕು, ಕಾಡನ್ನು ಉಳಿಸಬೇಕು ಇಷ್ಟು ಗಿಡಗಳನ್ನು ಕೆಡವಿದರೆ ಇಷ್ಟು ಗಿಡಗಳನ್ನು ಕೆಡವುವುವರೇ ನೆಡಬೇಕೆಂಬ ನಿಮ್ಮ ಇಲಾಖಾ ನಿಯಮವೆಲ್ಲ ಗಾಳಿಪಾಲಾಗಿದೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಹೌದು, ಕಾಡನ್ನು ಉಳಿಸಬೇಕು.

ಅಧ್ಯಕ್ಷರು.—ಈಗ ಶ್ರೀ ಕಡಪಟ್ಟಿಯವರ ಪ್ರಶ್ನೆ. ಅದನ್ನು ಪಿಡಬ್ಲ್ಯೂಡಿಗೆ ವರ್ಗಾಯಿಸಲಾಗಿದೆ

ಶ್ರೀ ಎಸ್.ಎಸ್ ಕಡಪಟ್ಟಿ.—ಮೊದಲು ನಾನು ಪಿಡಬ್ಲ್ಯೂಡಿಗೆ ಕೇಳಿದ್ದೆ. ಆಗ ಅದನ್ನು ಫಾರೆಸ್ಟ್‌ಗೆ ವರ್ಗಾಯಿಸಲಾಗಿತ್ತು. ಈಗ ಮತ್ತೆ ಪಿಡಬ್ಲ್ಯೂಡಿಗೆ ಕಳಿಸಲಾಗಿದೆ.

ಅಧ್ಯಕ್ಷರು.—ಶ್ರೀ ಜಿ.ಎಸ್ ಬಾಗಲಕೋಟೆಯವರೇ ನಿಮ್ಮ ಪ್ರಶ್ನೆಗೆ ಉತ್ತರಿಸಲು ಸಂಬಂಧಪಟ್ಟ ಮಂತ್ರಿಗಳು ಸಮಯ ಕೇಳಿರುವುದರಿಂದ ಆದು ಮುಂದೆ ಹೋಗಿದೆ. ಶ್ರೀ ವರದೇಗೌಡ ಅವರು ಅಬ್ಸೆಂಟ್.

ಕೊಪ್ಪದಲ್ಲಿ ಒಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪವಿಭಾಗವನ್ನು ತೆರೆಯುವ ಬಗ್ಗೆ.

೧೮೮೭ ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ಈ ಮೂರು ತಾಲ್ಲೂಕುಗಳಿಗೂ ಒಂದೇ ವಿದ್ಯುಚ್ಛಕ್ತಿ ಮಂಡಳಿಯ ಉಪ ವಿಭಾಗವು ನರಸಿಂಹರಾಜಪುರ ತಾಲ್ಲೂಕಿನ ಬಾಳೇಹೊನ್ನೂರು ಹೋಬಳಿಯಲ್ಲಿದ್ದು, ಈ ಒಂದೇ ಉಪವಿಭಾಗದ ಕಛೇರಿಯಿಂದ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕೊಪ್ಪದಲ್ಲಿ ಇನ್ನೊಂದು ಉಪ ವಿಭಾಗವನ್ನು ತೆರೆಯಲು ಏಕೆ ತೀಘ್ರ ಕ್ರಮ ಕೈಗೊಳ್ಳಬಾರದು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಮತ್ತು ಆ) ಹಿಂದೆ ಬಾಳೇಹೊನ್ನೂರಿನಲ್ಲಿ ಕೊಪ್ಪ, ನರಸಿಂಹರಾಜಪುರ, ಶೃಂಗೇರಿಗಳಿಗೆ ಸೇರಿದಂತೆ ಒಂದು ಉಪ ವಿಭಾಗ ಕಛೇರಿ ತೆರೆದಾಗ ಆಗಿ ಇದ್ದ ಗ್ರಾಹಕರ ಸಂಖ್ಯೆ ಆಡಳಿತದ ಅನುಕೂಲ ಇತ್ಯಾದಿ ಅಂಶಗಳನ್ನು ಗಮನಿಸಿ ತೆರೆಯಲಾಯಿತು. ವರ್ಷೇ ವರ್ಷೇ ಹೊಸ ಗ್ರಾಹಕರ ಸಂಖ್ಯೆ ಸೇರಿದಂತೆಲ್ಲಾ ಕೆಲವು ಮಾರ್ಪಾಡು ಮತ್ತು ಪುನರ್ ರಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಇತ್ತೀಚಿನ ವಿವರ ಪಡೆಯಲಾಗುತ್ತಿದೆ. ಅವಶ್ಯಕತೆ ಮಂಡಳಿಯ ಆರ್ಥಿಕ ಪರಿಸ್ಥಿತಿಯನ್ನವಲಂಬಿಸಿ ಕೊಪ್ಪದಲ್ಲಿ ಉಪ ವಿಭಾಗ ತೆರೆಯುವುದನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್. ಜಿ. ಗೋವಿಂದೇಗೌಡ.— ಅಧ್ಯಕ್ಷರೇ. ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ತಾಲೂಕುಗಳು ಬಾಳೆಹೊನ್ನೂರು ಹೋಬಳಿಯಲ್ಲಿರುವ ಉಪವಿಭಾಗದ ಕಛೇರಿ ವ್ಯಾಪ್ತಿಗೆ ಬರುತ್ತವೆ. ಕೊಪ್ಪ ಅಂತೂ ಆ ಪ್ರದೇಶಕ್ಕೆ ತುಂಬಾ ದೂರದಲ್ಲಿದೆ. ಅಲ್ಲಿ ಉಪವಿಭಾಗ ಕಚೇರಿ ತುಂಬಾ ಅವಶ್ಯಕತೆ ಇದೆ. ಮಲೆನಾಡಿನ ನಮ್ಮ ಕಡೆ ಮಳೆ ಜಾಸ್ತಿ ಇದ್ದು ದೊಡ್ಡ ಕಾಡಿನಲ್ಲಿ ಎಲೆಕ್ಟ್ರಿಕ್ ಲೈನ್ ಹೋಗುತ್ತದೆ. ಅವೆಲ್ಲ ಮರದವು. ಕೆಲವು ಬಿದ್ದುಹೋಗುವಂತಾಗಿದೆ. ಅಲ್ಲಿಗೆ ಸಾರಿರಾರು ಕಂಬಗಳ ಅವಶ್ಯಕತೆ ಇದೆ. ಈ ಬಗ್ಗೆ ಕೇವಲ ೯ ಜನ ಕಾರ್ಯಕರ್ತರು ಮಾತ್ರ ಕೆಲಸ ಮಾಡುತ್ತಿದ್ದು ಕೇವಲ ಮೂರು ತಿಂಗಳಲ್ಲಿ ಅದನ್ನು ನಿಮ್ಮ ಇಚ್ಛೆಯಂತೆ ಮುಗಿಸಲು ಅನಾನುಕೂಲವಾಗುವುದರಿಂದ ಮುಂದಿನ ವರ್ಷದ ವರೆಗೂ ಈ ಕಾರ್ಯವನ್ನು ಮುಂದೂಡಿದರೆ ಉತ್ತಮ. ಇದರ ಬಗ್ಗೆ ನಾನು ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇನೆ. ಮಂತ್ರಿಗಳು ಈಗಾದರೂ ತೀವ್ರ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ಕೆಲವು ಕಡೆ ಎಲೆಕ್ಟ್ರಿಸಿಟಿ ಕಂಬಗಳು ಬಿದ್ದು ಜನ ಜಾನುವಾರುಗಳಿಗೂ ತೊಂದರೆಯಾಗಿದೆ. ಆದ್ದರಿಂದ ಆದಷ್ಟು ಬೇಗ ಈ ಕೆಲಸ ಮುಗಿಸಿದರೆ ತುಂಬಾ ಅನುಕೂಲವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಈ ವಿಷಯದ ಗಹನತೆ ನಮ್ಮ ಗಮನಕ್ಕೆ ಬಂದಿದೆ. ಆದಷ್ಟು ಬೇಗ ಕೊಪ್ಪದಲ್ಲಿ ಒಂದು ವಿದ್ಯುತ್ ಉಪವಿಭಾಗವನ್ನು ತೆರೆಯಲು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು — ಶ್ರೀಗಳಾದ ಐ. ಬಿ. ಶಂಕರ್, ಶ್ರೀರಂಗದೇವರಾಯಲು, ಶ್ರೀ ಚಂದ್ರಶೇಖರ ಮಾವುನಿ, ಶ್ರೀ ಬಸವರಾಜ್, ಶ್ರೀ ಮಾಲಿಕಯ್ಯ ಗುತ್ತೇದಾರ್, ಶ್ರೀ ಕೆ. ತಿಪ್ಪೇಸ್ವಾಮಿ ಮತ್ತು ಶ್ರೀ ಶಿವರಾಮರೆಡ್ಡಿಯವರುಗಳು ಅಬ್ಸೆಂಟಾಗಿದ್ದಾರೆ.